ನಾಪೂದ ತಪಶೀಲು.		ನಾಟಾಗಳ ಸಂಖ್ಯೆ.	
ಕೂವೆ (ಪೂರ್)	..	49	
ನಂದಿ	..	151	
ಹೆಸವಾ (ಕಾಡಹಲಸು)	..	34	
ಮತ್ತಿ	..	17	
ಕರೀಮರ	..	1	
ಮಳಲಿ (ಯಬೊನಿ)	..	6	
ಕಾಡುಮರ	..	62	
	ಜುಮ್ಲಾ	320	ಸ್ವಲ್ಪ ಹೆಚ್ಚುಕಡಿಮೆ.

ಹರಾಜಿನ ಷರತ್ತುಗಳು—1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ಮಾಡಲ್ಪಟ್ಟ ಪ್ರಕಾರ ಇರತಕ್ಕವು; ಮತ್ತು ಹರಾಜ್ ಕಾಲದಲ್ಲಿ ಓದಲ್ಪಡುವವು.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜ್ರೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ಸೂರಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಶೇಷಪ್ಪ ಮೃತಪಟ್ಟ ಸದರೀ ಸೂರಪ್ಪನವರಿಗೆ ತಮ್ಮ ಆಗಬೇಕೆಂಬ ಹಕ್ಕುದಾವಿ ಮೇಲೆ ಕೋಲಾರ ಡಿಸ್ಟ್ರಿಕ್ಟು ಬವರಿಂಗ್‌ಪೇಟೆ ತಾಲ್ಲೂಕು ದಾಸರ ಹೊಸಹಳ್ಳಿ ಹೊರುೇವಾರಕುಪ್ಪೆ ಗ್ರಾಮದ ಸ್ಥಳದ ಶೇಷಪ್ಪನವರು ಸದರೀ ವಾಸಸ್ಥರಾಗಿ ಮೃತಪಟ್ಟ ಸೂರಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೇಷಪ್ಪನವರ ಅರ್ಜೀಯನ್ನ 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೂರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 46.

ಮೃತಪಟ್ಟ ರಂಗರಾಯರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಹೊಸಮನೆ ವೆಂಕಂಣ, ಮೃತಪಟ್ಟ ಸದರೀ ರಂಗರಾಯರಿಗೆ ಮಾವ ಆಗಬೇಕೆಂದು ಹಕ್ಕುದಾರೀ ಮೇಲೆ ತಿಪ್ಪ ಫಟ್ಟುದ ತಾಲ್ಲೂಕು ಜಂಗಮಕೋಟೆ ಸಮ್ಮತು ಕುಗಟೂರು ಗ್ರಾಮ ಸ್ಥಳದ ಹೊಸಮನೆ ವೆಂಕಂಣ ಸದರೀ ವಾಸಸ್ಥರಾಗಿ ಮೃತಪಟ್ಟ ರಂಗರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.